Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# GPSTR

## Previous Year Paper
### (Social Science) Paper-II
### 21 May, 2022

Teachingninja.in

ನೋಂದಣಿ ಸಂಖ್ಯೆ

5197636

# ಪರೀಕ್ಷೆ : 3 – 2022

## ಪತ್ರಿಕೆ ಸಂಕೇತ : 2D

## ವಿಷಯ ಸಂಕೇತ : P2-SS

### ಪತ್ರಿಕೆ – 2 – ಪ್ರಶ್ನೆ ಪತ್ರಿಕೆ ಪುಸ್ತಿಕೆ

## ವಿಷಯ : ಸಮಾಜ ಪಾಠಗಳು

ಪ್ರಶ್ನೆ ಪತ್ರಿಕೆ ಕ್ರಮಸಂಖ್ಯೆ 1521753

SEAL

**ಗರಿಷ್ಠ ಅಂಕಗಳು : 150**

**ಗರಿಷ್ಠ ಅವಧಿ : 3.00 ಗಂಟೆಗಳು**

**ಪರೀಕ್ಷಾ ಅವಧಿ : 10.00 A.M. to 1.00 P.M.**

### ಅಭ್ಯರ್ಥಿಗಳಿಗೆ ಸೂಚನೆಗಳು

**(ನೀಡಲಾಗಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿ)**

1. ನಿಮಗೆ ನೀಡಿರುವ ಸೀಲ್ ಮಾಡಿದ ಪಾಲಿಥಿನ್ ಕವರ್ ಓ.ಎಂ.ಆರ್. ಉತ್ತರ ಪತ್ರಿಕೆ ಮತ್ತು ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನೊಳಗೊಂಡಿದೆ, ಮೊದಲು ಜಾಗರೂಕತೆಯಿಂದ ಓ.ಎಂ.ಆರ್. ಉತ್ತರ ಹಾಳೆಯನ್ನು ಹೊರತೆಗೆಯಿರಿ. ಓ.ಎಂ.ಆರ್. ಉತ್ತರ ಹಾಳೆಯ ಮೇಲ್ಭಾಗದಲ್ಲಿ ಅಭ್ಯರ್ಥಿಯ ವೈಯಕ್ತಿಕ ಮಾಹಿತಿಯು ಪೂರ್ವಮುದ್ರಿತಗೊಂಡಿದೆ. ಸದರಿ ಪೂರ್ವಮುದ್ರಿತ ಮಾಹಿತಿಯು ತಮ್ಮದೇ ಎಂದು ಖಚಿತಪಡಿಸಿಕೊಳ್ಳುವುದು. ಇಲ್ಲವಾದಲ್ಲಿ ನಿಮ್ಮ ಉತ್ತರ ಪತ್ರಿಕೆ ಮತ್ತು ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದಿಲ್ಲ.
2. ಪ್ರಶ್ನೆ ಪತ್ರಿಕೆ ಪುಸ್ತಿಕೆಯು 50 ಬಹು ಆಯ್ಕೆ ಪ್ರಶ್ನೆಗಳನ್ನು ಹಾಗೂ 30 ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದ್ದು ಒಟ್ಟು 150 ಅಂಕಗಳನ್ನು ಹೊಂದಿದೆ.
3. ಪ್ರಶ್ನೆಗಳು ಕನ್ನಡ, ಆಂಗ್ಲ, ಉರ್ದು, ತಮಿಳು, ತೆಲುಗು ಮತ್ತು ಮರಾಠಿ ಮಾಧ್ಯಮಗಳಲ್ಲಿ ಮುದ್ರಿತವಾಗಿವೆ. ಒಂದು ವೇಳೆ ಪ್ರಶ್ನೆ ಪತ್ರಿಕೆಯಲ್ಲಿ ವ್ಯತ್ಯಾಸ/ಸಂದೇಹವಿದ್ದಲ್ಲಿ, **ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳನ್ನು ಅಂತಿಮವೆಂದು ಪರಿಗಣಿಸಲಾಗುವುದು.**
4. ಅಭ್ಯರ್ಥಿಗಳು ಮತ್ತು ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಜಾಗದಲ್ಲಿ ಸಹಿ ಮಾಡುವುದು. ಅಭ್ಯರ್ಥಿಯು ತನ್ನ ಎಡಗೈ ಹೆಬ್ಬೆರಳಿನ ಮುದ್ರೆಯನ್ನು ನಿಗದಿಪಡಿಸಿದ ಜಾಗದಲ್ಲಿ ಕಡ್ಡಾಯವಾಗಿ ಹಾಕುವುದು. ಅಭ್ಯರ್ಥಿಯ ಸಹಿ ಮತ್ತು ಹೆಬ್ಬೆರಳಿನ ಮುದ್ರೆ ಇಲ್ಲದಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
5. **ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಸರಿಪಡಿಸುವ ಪೆನ್ನಿನ (ವೈಟ್ನರ್) ಬಳಕೆ ಮಾಡಲು/ತಿದ್ದುಪಡಿಗಳಿಗೆ ಅನುಮತಿ ಇರುವುದಿಲ್ಲ ಹಾಗೂ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.**
6. ಕಚ್ಚಾ ಕಾರ್ಯವನ್ನು (Rough work) ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಒದಗಿಸಿರುವ ಖಾಲಿ ಸ್ಥಳದಲ್ಲಿ ಮಾತ್ರ ಮಾಡತಕ್ಕದ್ದು. **ಕಚ್ಚಾ ಕಾರ್ಯವನ್ನು ಯಾವುದೇ ಕಾರಣಕ್ಕೂ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಮಾಡತಕ್ಕದ್ದಲ್ಲ.**
7. ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದುವುದು. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಪ್ರಶ್ನೆ ಸಂಖ್ಯೆಗೆ ಎದುರಾಗಿ ಸೂಕ್ತ ವೃತ್ತವನ್ನು ಸಂಪೂರ್ಣವಾಗಿ ಶೇಡ್ ಮಾಡುವುದು. ಉದಾಹರಣೆಗೆ ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆ 20ಕ್ಕೆ '3' ಸರಿಯಾದ ಉತ್ತರವಾಗಿದ್ದಲ್ಲಿ, ಓ.ಎಂ.ಆರ್. ಉತ್ತರ ಹಾಳೆಯಲ್ಲಿ '3' ನೇ ವೃತ್ತವನ್ನು ನೀಲಿ/ಕಪ್ಪು ಶಾಹಿಯ ಬಾಲ್ ಪಾಯಿಂಟ್ ಪೆನ್ನನ್ನು ಉಪಯೋಗಿಸಿ ಕೆಳಕಂಡಂತೆ ಶೇಡಿಂಗ್ ಮಾಡುವುದು.

   20. ① ② ● ④

8. ಕೊಟ್ಟಿರುವ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವೃತ್ತಕ್ಕೆ ಶೇಡಿಂಗ್ ಮಾಡಿದ್ದಲ್ಲಿ, ಅಂತಹ ಉತ್ತರಗಳನ್ನು ತಪ್ಪು ಎಂದು ಪರಿಗಣಿಸಿ ಯಾವುದೇ ಅಂಕಗಳನ್ನು ನೀಡುವುದಿಲ್ಲ. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಉದಾಹರಣೆಯನ್ನು ಗಮನಿಸಿ.
9. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಹಾಗೂ ಇನ್ನಿತರೆ ವಿದ್ಯುನ್ಮಾನ ಪರಿಕರಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
10. ಅಭ್ಯರ್ಥಿಗಳಿಗೆ ಮೂಲ ಓ.ಎಂ.ಆರ್. ಉತ್ತರ ಹಾಳೆಯೊಂದಿಗೆ ಕಾರ್ಬನ್ ರಹಿತ ಓ.ಎಂ.ಆರ್. ಉತ್ತರ ಹಾಳೆಯನ್ನೂ ನೀಡಲಾಗಿದೆ. **ಪರೀಕ್ಷೆಯ ಬಳಿಕ ಅಭ್ಯರ್ಥಿಯು ಮೂಲ ಓ.ಎಂ.ಆರ್. ಉತ್ತರ ಹಾಳೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸತಕ್ಕದ್ದು ಹಾಗೂ ಕಾರ್ಬನ್‌ರಹಿತ ಪ್ರತಿಯನ್ನು ಅಭ್ಯರ್ಥಿಯೇ ಇಟ್ಟುಕೊಳ್ಳುವುದು. ಒಂದು ವೇಳೆ ಓ.ಎಂ.ಆರ್.ನ ಮೂಲ ಪ್ರತಿಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.**
11. ಬಹು ಆಯ್ಕೆ ಉತ್ತರಗಳನ್ನೊಳಗೊಂಡ ಪ್ರಶ್ನೆಗಳಿಗೆ ಒಂದು ಗಂಟೆ ಸಮಯವನ್ನು ನಿಗದಿಪಡಿಸಲಾಗಿರುತ್ತದೆ (10.00 A.M. ರಿಂದ 11.00 A.M.). ಉತ್ತರಿಸಿದ ಓ.ಎಂ.ಆರ್. ಶೀಟ್‌ಗಳನ್ನು 11.00 A.M. ಗಂಟೆಗೆ ಹಿಂಪಡೆಯಲಾಗುತ್ತದೆ. ವಿವರಣಾತ್ಮಕ ಪ್ರಶ್ನೆಗಳನ್ನು ಉತ್ತರಿಸಲು ಎರಡು ಗಂಟೆಗಳ ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ಹಾಗೂ ವಿವರಣಾತ್ಮಕ ಉತ್ತರಪತ್ರಿಕೆ ಪುಸ್ತಿಕೆಯನ್ನು 1.00 P.M. ಗಂಟೆಗೆ ಹಿಂಪಡೆಯಲಾಗುವುದು. ವಿಶೇಷ ಚೇತನರಿಗೆ ನಿಯಮಾನುಸಾರ ಹೆಚ್ಚುವರಿ ಕಾಲಾವಧಿ ನೀಡುವುದು.
12. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರ ಮಾಡುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

### ಓ.ಎಂ.ಆರ್. ಹಾಳೆಯನ್ನು ಭರ್ತಿ ಮಾಡಲು ಸೂಚನೆಗಳು

1. ಪ್ರತಿ ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ.
2. ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ಶೇಡ್ ಮಾಡತಕ್ಕದ್ದು. ಉತ್ತರ ಮಾರ್ಪಡಿಸಲು ಪ್ರಯತ್ನಿಸಬಾರದು.
3. ವೃತ್ತದಲ್ಲಿರುವ ಸಂಖ್ಯೆ ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ಶೇಡ್ ಮಾಡುವುದು.
4. ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು, ಚುಕ್ಕೆ ಅಥವಾ ಕಲೆಯನ್ನು ಮಾಡಬಾರದು.
5. ಇದು ಕಾರ್ಬನ್‌ರಹಿತ ಉತ್ತರ ಹಾಳೆಯಾಗಿದ್ದು, ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ಶೇಡ್ ಮಾಡುವ ಅಗತ್ಯ ಇರುವುದಿಲ್ಲ.

### ವಿವರಣಾತ್ಮಕ ಪರೀಕ್ಷೆ ಬರೆಯಲು ಸೂಚನೆಗಳು

1. ಪ್ರಶ್ನೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಸರಿಯಾಗಿ ನಮೂದಿಸತಕ್ಕದ್ದು.
2. ಒಂದೇ ಪ್ರಶ್ನೆಗೆ ಉತ್ತರಗಳನ್ನು ಪುನರಾವರ್ತಿಸುವಂತಿಲ್ಲ.
3. ಅವಶ್ಯಕತೆಯಿರುವ ಕಡೆ ಗ್ರಾಫ್, ಫ್ಲೋ ಚಾರ್ಟ್, ಚಿತ್ರ ಹಾಗೂ ಟೇಬಲ್‌ಗಳನ್ನು ಬರೆಯತಕ್ಕದ್ದು.
4. ಆನ್‌ಲೈನ್ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವಂತೆ ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಭಾಷಾ ಮಾಧ್ಯಮದಲ್ಲಿ ಬರೆಯತಕ್ಕದ್ದು.
5. ಪ್ರಶ್ನೆ ಪತ್ರಿಕೆ ಪುಸ್ತಿಕೆಯಿಂದ ಯಾವುದೇ ಪುಟವನ್ನು ತೆಗೆಯಬಾರದು.



Teachingninja.in

## KANNADA MEDIUM

## ಸಮಾಜ ಪಾಠಗಳು

1. ದೇವಾಲಯಗಳು ಮತ್ತು ಅವುಗಳಿರುವ ಸ್ಥಳಗಳನ್ನು ಹೊಂದುವ ಸರಿಯಾದ ಆಯ್ಕೆ ಗುರುತಿಸಿ.

| ಅ | ಬ |
|---|---|
| a. ಮಧುಕೇಶ್ವರ ದೇವಸ್ಥಾನ | i. ಪಟ್ಟದಕಲ್ಲು |
| b. ಪಾತಾಳೇಶ್ವರ ದೇವಸ್ಥಾನ | ii. ಹಂಪಿ |
| c. ಲೋಕೇಶ್ವರ ದೇವಸ್ಥಾನ | iii. ತಲಕಾಡು |
| d. ಕೈಲಾಸ ದೇವಸ್ಥಾನ | iv. ಬನವಾಸಿ |
| | v. ಎಲ್ಲೋರ |

| | a | b | c | d |
|---|---|---|---|---|
| (1) | iv | ii | iii | v |
| (2) | v | i | ii | iii |
| (3) | iv | iii | i | v |
| (4) | iii | ii | v | i |

2. ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಅವುಗಳಿಗೆ ಸರಿಹೊಂದುವ ಆಯ್ಕೆ ಗುರುತಿಸಿ.
   A. ಈತನು ಕೊಂಕಣ, ಗೋವಾ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು.
   B. ಈತನು ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು.
   C. ಈತನು ಕೈರೋದಲ್ಲಿ ಇಸ್ಲಾಂ ಮತಶಾಸ್ತ್ರ ಮತ್ತು ಕಾನೂನನ್ನು ಅಭ್ಯಸಿಸಿದನು.
   D. ಈತನು ಬೀದರಿನಲ್ಲಿ 'ಮದರಸಾ'ವನ್ನು ಸ್ಥಾಪಿಸಿದನು.
   (1) ಅಲ್ಲಾಉದ್ದೀನ್ ಹಸನ್ ಗಂಗು ಬಹಮನ್ ಷಾ
   (2) ಯೂಸುಫ್ ಆದಿಲ್ ಖಾನ್
   (3) ಒಂದನೇ ಮೊಹಮ್ಮದ್ ಷಾ
   (4) ಮೊಹಮ್ಮದ್ ಗವಾನ್

3. ಕೊಟ್ಟಿರುವ ಅರಸರ ಸರಿಯಾದ ಕಾಲಾನುಕ್ರಮಣಿಕೆಯು
   A. ಜಯಚಾಮರಾಜ ಒಡೆಯರ್
   B. ಚಿಕ್ಕದೇವರಾಜ ಒಡೆಯರ್
   C. ಹತ್ತನೇ ಚಾಮರಾಜ ಒಡೆಯರ್
   D. ಮುಮ್ಮಡಿ ಕೃಷ್ಣರಾಜ ಒಡೆಯರ್
   (1) B, D, C, A
   (2) C, B, D, A
   (3) B, D, A, C
   (4) D, C, A, B

4. ಮೋತಿಲಾಲ್ ನೆಹರೂ ಮತ್ತು ಸಿ. ಆರ್. ದಾಸ್‌ರವರು ಆರಂಭಿಸಿದ ರಾಜಕೀಯ ಪಕ್ಷ
   (1) ಸೋಶಿಯಲಿಸ್ಟ್ ಪಕ್ಷ
   (2) ಸ್ವರಾಜ್ ಪಕ್ಷ
   (3) ಜನತಾ ಪಕ್ಷ
   (4) ಸ್ವತಂತ್ರ ಕಾರ್ಮಿಕ ಪಕ್ಷ



Teachingninja.in

5. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆ ಗುರುತಿಸಿ.
**ಪ್ರತಿಪಾದನೆ (A) :** 'ಭಾರತ ಬಿಟ್ಟು ತೊಲಗಿ' ಚಳವಳಿಗೆ ಕಾಂಗ್ರೆಸ್ ಕರೆ ನೀಡಿತು.
**ಕಾರಣ (R) :** ಸ್ಟಾಫರ್ಡ್ ಕ್ರಿಪ್ಸ್ ಆಯೋಗವು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವ ಸಲಹೆ ನೀಡಿತು.
(1) (A) ಮತ್ತು (R) ಗಳೆರಡೂ ಸರಿ ಮತ್ತು (A) ಗೆ (R) ಸರಿಯಾದ ವಿವರಣೆ
(2) (A) ಮತ್ತು (R) ಗಳೆರಡೂ ಸರಿ ಆದರೆ (A) ಗೆ (R) ಸರಿಯಾದ ವಿವರಣೆಯಲ್ಲ
(3) (A) ಸರಿ ಮತ್ತು (R) ತಪ್ಪು
(4) (A) ತಪ್ಪು ಮತ್ತು (R) ಸರಿ

6. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡವರು
(1) ಮೊದಲನೇ ಮಾಧವರಾವ್
(2) ಎರಡನೇ ಮಾಧವರಾವ್
(3) ಎರಡನೇ ಬಾಜಿರಾವ್
(4) ಬಾಲಾಜಿ ಬಾಜಿರಾವ್

7. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಅವುಗಳಿಗೆ ಸಂಬಂಧಿಸಿದ ಸರಿಯಾದ ಆಯ್ಕೆ ಗುರುತಿಸಿ.
i. ಈಕೆಯು ತನ್ನ 'ಸ್ತ್ರೀ–ಪುರುಷ ತುಲನ' ಎಂಬ ಪುಸ್ತಕದಲ್ಲಿ ಮಹಿಳಾ ಶೋಷಣೆಯನ್ನು ವಿರೋಧಿಸಿದಳು.
ii. ಈಕೆಯು 'ಸತ್ಯಶೋಧಕ ಸಮಾಜ' ದ ಸದಸ್ಯೆಯಾಗಿದ್ದಳು.
(1) ಸಾವಿತ್ರಿಬಾಯಿ ಫುಲೆ
(2) ಪಂಡಿತ್ ರಮಾಬಾಯಿ
(3) ತಾರಾಬಾಯಿ ಶಿಂಧೆ
(4) ಜೀಜಾ ಬಾಯಿ

8. ಕೆಳಗೆ ಕೊಟ್ಟಿರುವ ನಿಬಂಧನೆಯು ಸಂಬಂಧಿಸಿರುವುದು "ತನ್ನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ರಾಜನು ಇಟ್ಟುಕೊಳ್ಳಬೇಕು ಮತ್ತು ಈತನ ಖರ್ಚನ್ನು ಆತನೇ ಭರಿಸಬೇಕು".
(1) ಒಡೆದು ಆಳುವ ನೀತಿ
(2) ಸಹಾಯಕ ಸೈನ್ಯ ಪದ್ಧತಿ
(3) ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ
(4) ಒಳಗೊಳ್ಳುವ ನೀತಿ

9. ಅ – ಪಟ್ಟಿಯಲ್ಲಿ ವರ್ಷಗಳನ್ನು ಮತ್ತು ಬ – ಪಟ್ಟಿಯಲ್ಲಿ ಅವುಗಳಿಗೆ ಸೇರಿದ ಕಾಯಿದೆಗಳನ್ನು ನೀಡಲಾಗಿದ್ದು ಅವುಗಳು ಸರಿಹೊಂದುವ ಆಯ್ಕೆ ಗುರುತಿಸಿ.

| ಪಟ್ಟಿ – ಅ | ಪಟ್ಟಿ – ಬ |
|---|---|
| a. 1773 | i. ಭಾರತಕ್ಕೆ ಒಬ್ಬ ಹೈ ಕಮಿಷನರನ್ನು ನೇಮಕ ಮಾಡಲಾಯಿತು |
| b. 1784 | ii. ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಲಾಯಿತು |
| c. 1909 | iii. ನಿಯಂತ್ರಣ ಮಂಡಳಿ ಅಸ್ತಿತ್ವಕ್ಕೆ ಬಂದಿತು |
| d. 1919 | iv. ಪ್ರತ್ಯೇಕ ಚುನಾವಣಾ ಮತಗಟ್ಟೆ ರಚಿಸಲಾಯಿತು |
| | v. ಬಂಗಾಳದ ಗೌವರ್ನರನು ಮೂರೂ ಪ್ರೆಸಿಡೆನ್ಸಿಗಳಿಗೆ ಗೌವರ್ನರ್ ಜನರಲ್ ಆದನು |

| | a | b | c | d |
|---|---|---|---|---|
| (1) | iii | ii | iv | v |
| (2) | ii | i | iii | v |
| (3) | iv | iii | i | ii |
| (4) | v | iii | iv | i |



Teachingninja.in

10. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಅವುಗಳಿಗೆ ಸಂಬಂಧಿಸಿದ ಸರಿಯಾದ ಆಯ್ಕೆ ಗುರುತಿಸಿ.

i. ಮಾನವ ಕುಲಕ್ಕೆ ಒಂದು ಜಾತಿ, ಒಂದು ಧರ್ಮ ಮತ್ತು ಒಬ್ಬನೇ ದೇವರು.

ii. ವೈಕಂ ಸತ್ಯಾಗ್ರಹವನ್ನು ಆರಂಭಿಸಲಾಯಿತು.

(1) ಆತ್ಮ ಗೌರವ ಚಳವಳಿ
(2) ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ
(3) ಥಿಯೋಸಾಫಿಕಲ್ ಸೊಸೈಟಿ
(4) ಯುವ ಬಂಗಾಳಿ ಚಳವಳಿ

11. ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ಥಳವನ್ನು ಗಮನಿಸಿ, ಅದಕ್ಕೆ ಸರಿ ಹೊಂದುವ ಆಯ್ಕೆ ಗುರುತಿಸಿ.



Teachingninja.in

(1) ಚೌರಿ–ಚೌರ ಘಟನೆ
(2) ದಂಡಿ ಸತ್ಯಾಗ್ರಹ
(3) ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ
(4) ಸಬರಮತಿ ಆಶ್ರಮ ಸ್ಥಾಪನೆ

12. ಕೊಟ್ಟಿರುವ ಮೊದಲೆರಡು ಪದಗಳ ನಡುವಿನ ಸಂಬಂಧವನ್ನು ಗುರುತಿಸಿ, ಮೂರನೇ ಪದಕ್ಕೆ ಉತ್ತರವನ್ನು ಆರಿಸಿ.
ಪೆರೆಸ್ಟ್ರೋಯಿಕಾ : ಸೋವಿಯತ್ ರಷ್ಯಾ : : ಮುನ್ನಡೆಯ ಮಹಾಜಿಗಿತ :

(1) ಅಮೇರಿಕ
(2) ಜಪಾನ್
(3) ಚೀನಾ
(4) ಜರ್ಮನಿ

13. ಭಾರತದ ಸಂವಿಧಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಇಲ್ಲಿ ವಿವರಿಸಲಾಗಿದೆ

(1) 14 ರಿಂದ 18 ನೇ ವಿಧಿ
(2) 19 ರಿಂದ 22 ನೇ ವಿಧಿ
(3) 23 ರಿಂದ 24 ನೇ ವಿಧಿ
(4) 25 ರಿಂದ 28 ನೇ ವಿಧಿ



Teachingninja.in

14. ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದ ಉತ್ತರಗಳ ಗುಂಪು.

a. ಆಹಾರ ಮತ್ತು ಕೃಷಿ ಸಂಸ್ಥೆಯ ಕೇಂದ್ರ ಕಛೇರಿ ಜಿನಿವಾದಲ್ಲಿದೆ.

b. ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ ರೋಮ್‌ನಲ್ಲಿದೆ.

c. 1965 ರಲ್ಲಿ ಯೂನಿಸೆಫ್ ನೊಬೆಲ್ ಬಹುಮಾನ ಗಳಿಸಿದೆ.

d. ಐ.ಎಂ.ಎಫ್. ಕೇಂದ್ರ ಕಛೇರಿ ಅಮೇರಿಕಾದ ವಾಷಿಂಗ್ಟನ್‌ನಲ್ಲಿದೆ.

(1) a ಮತ್ತು b ಮಾತ್ರ ಸರಿ
(2) c ಮತ್ತು d ಮಾತ್ರ ಸರಿ
(3) b ಮತ್ತು d ಮಾತ್ರ ಸರಿ
(4) a ಮತ್ತು c ಮಾತ್ರ ಸರಿ

15. ಭಾರತದ ರಾಷ್ಟ್ರಪತಿಯವರನ್ನು ಚುನಾಯಿಸುವವರು

(1) ಹದಿನೆಂಟು ವರ್ಷ ವಯೋಮಾನ ಮೀರಿದ ಎಲ್ಲಾ ಭಾರತೀಯ ನಾಗರೀಕರು
(2) ಸ್ಥಳೀಯ ಸ್ವಯಂ ಸರ್ಕಾರ ಮತ್ತು ವಿಧಾನ ಸಭೆಯ ಚುನಾಯಿತ ಸದಸ್ಯರು ಮಾತ್ರ
(3) ಸಂಸತ್ತಿನ ಎರಡೂ ಸದನಗಳ ಚುನಾಯಿತ ಸದಸ್ಯರು ಮಾತ್ರ
(4) ಸಂಸತ್ತಿನ ಎರಡೂ ಸದನಗಳ ಹಾಗೂ ಎಲ್ಲಾ ರಾಜ್ಯಗಳ ವಿಧಾನ ಸಭೆಯ ಚುನಾಯಿತ ಸದಸ್ಯರು

16. ಸಂವಿಧಾನದ ವಿಧಿ 352 ರಿಂದ 360 ಇದರ ಬಗ್ಗೆ ಹೇಳುತ್ತದೆ

(1) ವಿಧಾನ ಸಭೆಯ ಸಭಾಧ್ಯಕ್ಷರ ಅಧಿಕಾರ
(2) ಭಾರತೀಯ ಚುನಾವಣಾ ಆಯೋಗದ ಅಧಿಕಾರ ಮತ್ತು ಕಾರ್ಯ
(3) ಭಾರತದ ಪ್ರಧಾನ ಮಂತ್ರಿಯವರ ಅಧಿಕಾರ ಮತ್ತು ಕಾರ್ಯ
(4) ಭಾರತದ ರಾಷ್ಟ್ರಪತಿಯವರ ತುರ್ತು ಅಧಿಕಾರ ಮತ್ತು ಕಾರ್ಯ

17. ಸರಿ ಹೊಂದುವ ಆಯ್ಕೆಯನ್ನು ಗುರುತಿಸಿ.

| A | B |
|---|---|
| a. ವಿಶ್ವಮಾನವ ಹಕ್ಕುಗಳ ಅಂಗೀಕಾರ | i. 1927 |
| b. ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ | ii. 1948 |
| c. ರಷ್ಯಾದ ಕ್ರಾಂತಿ | iii. 1776 |
| d. ಫ್ರಾನ್ಸಿನ ಕ್ರಾಂತಿ | iv. 1789 |
| | v. 1917 |

| | a | b | c | d |
|---|---|---|---|---|
| (1) | ii | iii | v | iv |
| (2) | iii | ii | iv | i |
| (3) | ii | i | iii | v |
| (4) | i | iii | iv | v |



Teachingninja.in

18. ಕೊಟ್ಟಿರುವ ಹೇಳಿಕೆಗಳನ್ನು ಓದಿ, ಸರಿಯಾದ ಆಯ್ಕೆಯನ್ನು ಗುರುತಿಸಿ.
A. ಸಲ್ಯಾನಿ ಗ್ರಾಮಸ್ಥರು 1983ರಲ್ಲಿ ಅಪ್ಪಿಕೋ ಚಳವಳಿ ಆರಂಭಿಸಿದರು.
B. ಮೌನ ಕಣಿವೆ ಚಳವಳಿಯು ತೆಹ್ರಿ–ಘರವಾಲ್ ಜಿಲ್ಲೆಯಲ್ಲಿ ನಡೆಯಿತು.
C. ನರ್ಮದಾ ಬಚಾವೋ ಆಂದೋಲನವು ಸ್ಥಳೀಯ ಆದಿವಾಸಿಗಳ ಒಕ್ಕಲೆಬ್ಬಿಸುವುದರ ವಿರುದ್ಧವಾಗಿತ್ತು.
D. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪಿಸಿದರು.
(1) A ಮತ್ತು B ಮಾತ್ರ ಸರಿ
(2) C ಮತ್ತು D ಮಾತ್ರ ಸರಿ
(3) A, C ಮತ್ತು D ಮಾತ್ರ ಸರಿ
(4) B, C ಮತ್ತು D ಮಾತ್ರ ಸರಿ

19. ಕೊಟ್ಟಿರುವ ಹೇಳಿಕೆಗಳನ್ನು ಗಮನಿಸಿ, ಕೆಳಗಿನ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರವನ್ನು ಗುರುತಿಸಿ.
a. ಸಾಮಾಜೀಕರಣವು ವ್ಯಕ್ತಿತ್ವ ಬೆಳವಣಿಗೆಗೆ ಸಹಾಯ ಮಾಡುತ್ತದೆ.
b. ಸಾಮಾಜೀಕರಣವು ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುತ್ತದೆ.
c. ಸಾಮಾಜೀಕರಣವು ಶಾಲೆಗಳಲ್ಲಿ ಸಂಭವಿಸುವುದಿಲ್ಲ.
d. ಸಾಮಾಜೀಕರಣವು ವ್ಯಕ್ತಿಯ ಬೆಳವಣಿಗೆಗೆ ಮಾರಕ.
(1) a ಮಾತ್ರ ಸರಿ
(2) b ಮಾತ್ರ ಸರಿ
(3) c ಮತ್ತು d ಮಾತ್ರ ಸರಿ
(4) a ಮತ್ತು b ಮಾತ್ರ ಸರಿ

20. ''ಸಾಮಾಜಿಕ ವರ್ತನೆಯನ್ನು ಅರ್ಥೈಸುವ ಅಧ್ಯಯನವೇ ಸಮಾಜಶಾಸ್ತ್ರ'' ಎಂದು ಹೇಳಿದವರು
(1) ಕಾರ್ಲ್ ಮಾರ್ಕ್ಸ್
(2) ಆಗಸ್ಟ್ ಕಾಮ್ಟೆ
(3) ಮ್ಯಾಕ್ಸ್ ವೆಬರ್
(4) ಎಮಿಲಿ ಡರ್ಖಿಂ

21. ಕೊಟ್ಟಿರುವ ಹೇಳಿಕೆಗಳನ್ನು ಓದಿ, ಅವುಗಳಿಗೆ ಸಂಬಂಧಿಸಿದ ಸರಿಯಾದ ವ್ಯಕ್ತಿಯನ್ನು ಆರಿಸಿ.
a. 'ದಿ ಹೋಲಿ ಫ್ಯಾಮಿಲಿ' ಎಂಬ ಪುಸ್ತಕವನ್ನು ಬರೆದಿದ್ದಾರೆ.
b. 'ಹೆಗಲ್'ರವರು ಇವರ ಗುರುಗಳಾಗಿದ್ದರು.
c. ಇವರು ವರ್ಗ ಸಂಘರ್ಷ ಸಿದ್ಧಾಂತದ ಸ್ಥಾಪಕರು ಎನ್ನಲಾಗಿದೆ.
d. ಇವರು ಮೇ 05, 1818ರಲ್ಲಿ ಜನಿಸಿದರು.
(1) ಎಮಿಲಿ ಡರ್ಖಿಂ
(2) ಮ್ಯಾಕ್ಸ್ ವೆಬರ್
(3) ಜಿ. ಎಸ್. ಘುರ್ಯೆ
(4) ಕಾರ್ಲ್ ಮಾರ್ಕ್ಸ್

22. **ಪ್ರತಿಪಾದನೆ (A) :** ಬಾಲ ಕಾರ್ಮಿಕ ಪದ್ಧತಿಯು ಸಮಾಜದಲ್ಲಿ ಹೆಚ್ಚಾಗುತ್ತಿದೆ.
**ಕಾರಣ (R) :** ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳಸಾಗಾಣಿಕೆಗಳು ಸಂಭವಿಸುತ್ತವೆ.
(1) (A) ಮತ್ತು (R) ಸರಿ ಮತ್ತು (A) ಗೆ (R) ಸರಿಯಾದ ವಿವರಣೆಯಾಗಿದೆ
(2) (A) ಮತ್ತು (R) ಸರಿ ಆದರೆ (A) ಗೆ (R) ಸರಿಯಾದ ವಿವರಣೆಯಲ್ಲ
(3) (A) ಸರಿ ಮತ್ತು (R) ತಪ್ಪು
(4) (A) ತಪ್ಪು ಮತ್ತು (R) ಸರಿ



Teachingninja.in

23. ಭಾರತದ ಪಶ್ಚಿಮ ತೀರದಲ್ಲಿ ಕಂಡುಬರುವ ಬಂದರುಗಳ ಸರಿಯಾದ ಗುಂಪು
(1) ಕಾಂಡ್ಲ, ಕೊಚ್ಚಿ, ಮರ್ಮಗೋವಾ, ಮುಂಬೈ
(2) ಚೆನ್ನೈ, ಎನ್ನೋರ್, ಪಾರಾದೀಪ್, ಹಾಲ್ದಿಯಾ
(3) ಕಾಂಡ್ಲ, ಕೊಚ್ಚಿ, ಚೆನ್ನೈ, ಎನ್ನೋರ್
(4) ಮರ್ಮಗೋವಾ, ಮುಂಬೈ, ಪಾರಾದೀಪ್, ಹಾಲ್ದಿಯಾ

24. ಪರ್ವತ ಕಾಡುಗಳಲ್ಲಿ ಕಂಡುಬರುವ ಸಸ್ಯವರ್ಗ
(1) ಎಬೋನಿ, ಮಹೋಗನಿ ಮತ್ತು ತೇಗ
(2) ಸಿಡಾರ್, ಸ್ಪ್ರೂಸ್ ಮತ್ತು ಚೆಸ್ಟ್‌ನಟ್
(3) ಸುಂದರಿ, ಶ್ರೀಗಂಧ ಮತ್ತು ಎಬೋನಿ
(4) ಕಗ್ಗಲಿ, ಗೊಬ್ಬಳಿ ಮತ್ತು ಬಾಬೂಲ್

25. ಸರಿಹೊಂದುವ ಆಯ್ಕೆಯನ್ನು ಗುರುತಿಸಿ.

| ಅ | ಬ |
|---|---|
| a. ಹಿರಾಕುಡ್ ಯೋಜನೆ | i. ಕೃಷ್ಣಾ ನದಿ |
| b. ಸರದಾರ್ ಸರೋವರ ಯೋಜನೆ | ii. ಶರಾವತಿ ನದಿ |
| c. ಭಾಕ್ರಾನಂಗಲ್ ಯೋಜನೆ | iii. ಮಹಾನದಿ |
| d. ಲಿಂಗನಮಕ್ಕಿ ಅಣೆಕಟ್ಟು | iv. ನರ್ಮದಾ |
| | v. ಸಟ್ಲೆಜ್ |

| | a | b | c | d |
|---|---|---|---|---|
| (1) | iii | ii | i | v |
| (2) | iii | iv | ii | i |
| (3) | iii | iv | v | ii |
| (4) | iii | i | v | iv |

a – 3
b – 4
c – 5
d –

26. ಚಹಾ ಬೆಳೆಗೆ ಹೆಚ್ಚು ಸೂಕ್ತವಾದ ಭೌಗೋಳಿಕ ಲಕ್ಷಣವನ್ನು ಹೊಂದಿರುವ ರಾಜ್ಯಗಳ ಸರಿಯಾದ ಆಯ್ಕೆ
(1) ಗುಜರಾತ್, ಅಸ್ಸಾಂ, ಮಧ್ಯಪ್ರದೇಶ, ರಾಜಸ್ಥಾನ
(2) ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ
(3) ಕರ್ನಾಟಕ, ರಾಜಸ್ಥಾನ, ಗೋವಾ, ಕೇರಳ
(4) ಕೇರಳ, ಉತ್ತರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ

27. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮೂರನೇ ಪದಕ್ಕೆ ಉತ್ತರವನ್ನು ಆರಿಸಿ.
ಕೆಂಪು ಮಣ್ಣು : ನೀಸ್ ಶಿಲೆ : : ಕಪ್ಪು ಮಣ್ಣು:
(1) ಗ್ರಾನೈಟ್
(2) ಬಸಾಲ್ಟ್
(3) ಮರಳುಶಿಲೆ
(4) ಜಿಪ್ಸಂ



Teachingninja.in

28. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆ ಗುರುತಿಸಿ.

a. ಕನಿಷ್ಠ ಉಬ್ಬರಗಳ ಸಮಯದಲ್ಲಿ ಸೂರ್ಯ ಮತ್ತು ಭೂಮಿ ಒಂದೇ ಸರಳರೇಖೆಯಲ್ಲಿದ್ದು ಚಂದ್ರನು ಭೂಮಿಗೆ ಸಮಕೋನದಲ್ಲಿರುತ್ತಾನೆ.

b. ಅಧಿಕ ಭರತ ಉಂಟಾಗುವಾಗ ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳು ಒಂದೇ ಸರಳರೇಖೆಯಲ್ಲಿರುತ್ತವೆ.

(1) a ಸರಿ ಮತ್ತು b ತಪ್ಪು
(2) a ತಪ್ಪು ಮತ್ತು b ಸರಿ
(3) a ಮತ್ತು b ಎರಡೂ ಸರಿ
(4) a ಮತ್ತು b ಎರಡೂ ತಪ್ಪು

29. ಉತ್ತರ ಅಟ್ಲಾಂಟಿಕ್ ಸಾಗರ ಪ್ರವಾಹಗಳ ಸರಿಯಾದ ಗುಂಪೆಂದರೆ

(1) ಗಲ್ಫ್ ಸ್ಟ್ರೀಂ ಪ್ರವಾಹ, ಲ್ಯಾಬ್ರಡಾರ್ ಪ್ರವಾಹ ಮತ್ತು ಬೆಂಗ್ವುಲಾ ಪ್ರವಾಹ
(2) ಬೆಂಗ್ವುಲಾ ಪ್ರವಾಹ , ಫಾಕ್‌ಲ್ಯಾಂಡ್ ಪ್ರವಾಹ ಮತ್ತು ಲ್ಯಾಬ್ರಡಾರ್ ಪ್ರವಾಹ
(3) ನಾರ್ವೆಜಿಯನ್ ಪ್ರವಾಹ, ಲ್ಯಾಬ್ರಡಾರ್ ಪ್ರವಾಹ ಮತ್ತು ಗಲ್ಫ್ ಸ್ಟ್ರೀಂ ಪ್ರವಾಹ
(4) ಬ್ರೆಜಿಲ್ ಪ್ರವಾಹ, ಬೆಂಗ್ವುಲಾ ಪ್ರವಾಹ ಮತ್ತು ಕ್ಯಾನರಿ ಪ್ರವಾಹ

30. ಭಾರತದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಸರಿಯಾದ ಗುಂಪೆಂದರೆ

(1) ಸಿಂಧೂ ನದಿ, ಮಹಾನದಿ, ನರ್ಮದಾ ಮತ್ತು ತಾಪಿ
(2) ಮಹಾನದಿ, ರಿಹಾಂದ್, ತಾಪಿ ಮತ್ತು ಸಿಂಧೂ ನದಿ
(3) ಕೃಷ್ಣಾ, ಕಾವೇರಿ, ಗೋದಾವರಿ ಮತ್ತು ಸಿಂಧೂ ನದಿ
(4) ಸಿಂಧೂ ನದಿ, ನರ್ಮದಾ, ತಾಪಿ ಮತ್ತು ನೇತ್ರಾವತಿ

31. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಅವುಗಳಿಗೆ ಹೊಂದುವ ಸರಿಯಾದ ಆಯ್ಕೆ ಗುರುತಿಸಿ.

a. ವರ್ಜೀನಿಯಾವು ಈ ಬೆಳೆಯ ಒಂದು ತಳಿಯಾಗಿದೆ.

b. ಪೋರ್ಚುಗೀಸರು 17ನೇ ಶತಮಾನದಲ್ಲಿ ಈ ಬೆಳೆಯನ್ನು ಭಾರತಕ್ಕೆ ಪರಿಚಯಿಸಿದರು.

c. ಈ ಬೆಳೆಯನ್ನು ಸಾಧಾರಣ ಮಳೆ ಮತ್ತು ಹೆಚ್ಚು ಉಷ್ಣಾಂಶವುಳ್ಳ ಮರಳು ಮಿಶ್ರಿತ ಮಣ್ಣಿನ ಪ್ರದೇಶದಲ್ಲಿ ಬೆಳೆಯಲಾಗುತ್ತದೆ.

d. ಬೆಳಗಾವಿಯ ನಿಪ್ಪಾಣಿಯು ಇದರ ಮಾರುಕಟ್ಟೆಗೆ ಪ್ರಸಿದ್ಧಿಯಾಗಿದೆ.

(1) ಹತ್ತಿ
(2) ತಂಬಾಕು
(3) ಜೋಳ
(4) ಕಬ್ಬು

32. ಸ್ತರ ಭಂಗ ಮತ್ತು ಆಳ ಗಣಿಗಾರಿಕೆಯಿಂದ ಸಂಭವಿಸುವುದು

(1) ಪ್ರವಾಹ
(2) ಜ್ವಾಲಾಮುಖಿ ಹೊರಸೂಸುವಿಕೆ
(3) ಭೂಕಂಪ
(4) ಕಡಲತೀರ ಸವೆತ



Teachingninja.in

33. ಬೆಲೂಮ್ ಗುಹೆ ಭೂ ಸ್ವರೂಪವು ಇದರಿಂದ ನಿರ್ಮಾಣಗೊಂಡಿದೆ
(1) ಪವನ ಕಾರ್ಯ
(2) ಅಂತರ್ಜಲದ ಕಾರ್ಯ
(3) ಹಿಮನದಿ ಕಾರ್ಯ
(4) ಸಾಗರದ ಅಲೆಗಳ ಕಾರ್ಯ

34. ಓಜೋನ್ ಪದರವು ಮುಖ್ಯವಾದ ಪಾತ್ರ ನಿರ್ವಹಿಸುವ ರೀತಿ
(1) ಮೋಡಗಳ ಕ್ರೋಢೀಕರಣಗೊಳಿಸುವಿಕೆಯಲ್ಲಿ ಸಹಾಯ
(2) ರೇಡಿಯೋ ತರಂಗಗಳನ್ನು ಪ್ರತಿಫಲಿಸುವುದು
(3) ಸೂರ್ಯನಿಂದ ಬರುವ ನೇರಳಾತೀತ ಕಿರಣಗಳನ್ನು ಹೀರಿಕೊಳ್ಳುವುದು
(4) ಶೀತ ಹವಾಗುಣವನ್ನು ಹಿಡಿದಿಡುವುದು

35. ಕೆಳಗಿನವುಗಳನ್ನು ಹೊಂದಿಸಿ, ಸರಿಯಾದ ಆಯ್ಕೆಯನ್ನು ಕೊಟ್ಟಿರುವ ಸಂಕೇತಗಳ ಸಹಾಯದಿಂದ ಗುರುತಿಸಿ.

| | A | | B |
|---|---|---|---|
| a. | ಛಾಯಾ ಭಗವತಿ ಜಲಪಾತ | i. | ಶಿವಮೊಗ್ಗ |
| b. | ಇರ್ಪು ಜಲಪಾತ | ii. | ಮಂಡ್ಯ |
| c. | ಗೇರುಸೊಪ್ಪ ಜಲಪಾತ | iii. | ಬೆಳಗಾವಿ |
| d. | ಉಂಚಳ್ಳಿ ಜಲಪಾತ | iv. | ಕೊಡಗು |
| | | v. | ಉತ್ತರ ಕನ್ನಡ |

| | a | b | c | d |
|---|---|---|---|---|
| (1) | ii | i | iii | iv |
| (2) | iii | iv | i | v |
| (3) | iii | ii | i | v |
| (4) | i | ii | v | iv |

36. ಅನಾಥ ವೃದ್ಧರಿಗೆ ಪ್ರತಿ ತಿಂಗಳೂ ವೃದ್ಧಾಪ್ಯ ವೇತನ ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ
(1) ನಿರ್ಮಲ ಗ್ರಾಮ ಯೋಜನೆ
(2) ಸಂಧ್ಯಾ ಸುರಕ್ಷಾ ಯೋಜನೆ
(3) ಇಂದಿರಾ-ಆವಾಸ್ ಯೋಜನೆ
(4) ವಾಲ್ಮೀಕಿ-ಅಂಬೇಡ್ಕರ್ ಆವಾಸ್ ಯೋಜನೆ

37. ತೆರಿಗೆಯೇತರ ವರಮಾನಕ್ಕೆ ಒಂದು ಉದಾಹರಣೆ
(1) ಸೇವಾ ತೆರಿಗೆ
(2) ಭಾರತೀಯ ರಿಸರ್ವ್ ಬ್ಯಾಂಕ್ ಗಳಿಸುವ ಲಾಭ
(3) ಕೇಂದ್ರ ಅಬಕಾರಿ ತೆರಿಗೆ
(4) ಆಮದು ಮತ್ತು ರಫ್ತು ಸುಂಕಗಳು

38. 'ಗ್ರಾಮಗಳ ಅಭಿವೃದ್ಧಿಯೇ ಭಾರತದ ನೈಜ ಅಭಿವೃದ್ಧಿ' ಎಂದು ಹೇಳಿದವರು
(1) ಪಂಡಿತ್ ನೆಹರೂ
(2) ಲಾಲ್ ಬಹದ್ದೂರ್ ಶಾಸ್ತ್ರಿ
(3) ಮಹಾತ್ಮ ಗಾಂಧಿ
(4) ವಲ್ಲಭ ಭಾಯ್ ಪಟೇಲ್



Teachingninja.in

39. ಕೊಟ್ಟಿರುವ ಸೂತ್ರವನ್ನು ಗಮನಿಸಿ ಮತ್ತು ಅದಕ್ಕೆ ಸರಿಹೊಂದುವ ಆಯ್ಕೆ ಆರಿಸಿ :

ವಿತ್ತೀಯ ಕೊರತೆ – ಬಡ್ಡಿ ಪಾವತಿ

(1) ರೆವಿನ್ಯೂ ಕೊರತೆ

(2) ಪ್ರಾಥಮಿಕ ಕೊರತೆ

(3) ಆಯವ್ಯಯ ಕೊರತೆ

(4) ಬಡ್ಡಿ ಕೊರತೆ

40. ಶ್ರಮದ ಲಕ್ಷಣಕ್ಕೆ ಸಂಬಂಧಿಸಿದ ಸರಿಯಾದ ಆಯ್ಕೆ ಗುರುತಿಸಿ.

a. ಶ್ರಮವನ್ನು ಸಂಗ್ರಹಿಸಬಹುದು.

b. ಶ್ರಮದ ವಲಸೆಯ ಪ್ರಮಾಣ ಕಡಿಮೆ.

c. ಶ್ರಮವು ದಕ್ಷತೆಯಲ್ಲಿ ಭಿನ್ನತೆ ಹೊಂದಿದೆ.

d. ಶ್ರಮವನ್ನು ಶ್ರಮಿಕನಿಂದ ಬೇರ್ಪಡಿಸಬಹುದು.

(1) a ಮತ್ತು b ಮಾತ್ರ ಸರಿ
(2) c ಮಾತ್ರ ಸರಿ
(3) b ಮತ್ತು c ಮಾತ್ರ ಸರಿ
(4) d ಮಾತ್ರ ಸರಿ

41. ವಿಶ್ವ ಗ್ರಾಹಕರ ಹಕ್ಕುಗಳ ಆಚರಣೆಯ ದಿನ

(1) 10 ಡಿಸೆಂಬರ್
(2) 15 ಮಾರ್ಚ್
(3) 05 ಮೇ
(4) 23 ಏಪ್ರಿಲ್

42. ಕೊಟ್ಟಿರುವ ಆಯ್ಕೆಗಳಲ್ಲಿ 'ಬಯೋಕಾನ್ ಲಿಮಿಟೆಡ್' ಸಂಸ್ಥೆಯ ಅಧ್ಯಕ್ಷರು

(1) ಅಜೀಂ ಪ್ರೇಮ್‌ಜಿ
(2) ಕಿರಣ್ ಮಜುಮ್‌ದಾರ್ ಷಾ
(3) ಏಕ್ತ ಕಪೂರ್
(4) ವರ್ಗೀಸ್ ಕುರಿಯನ್

43. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ವರ್ಷ

(1) 1982
(2) 1984
(3) 1986
(4) 1988

44. ಕೊಟ್ಟಿರುವ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಆಯ್ಕೆ ಗುರುತಿಸಿ.

a. WTO ಮತ್ತು OPEC ಗಳು ಜಾಗತೀಕರಣದ ಪರಿಣಾಮವಾಗಿವೆ.

b. ಜಾಗತೀಕರಣವು ಗುಲಾಮಗಿರಿ ಮತ್ತು ಬಾಲಕಾರ್ಮಿಕತನ ತೊಡೆದು ಹಾಕುತ್ತದೆ.

c. ಶೀಘ್ರ ಆಹಾರ ಸರಪಳಿ ಜನರ ಆರೋಗ್ಯವನ್ನು ಉತ್ತಮಪಡಿಸುತ್ತದೆ.

d. ಜಾಗತೀಕರಣವು ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ ಹರಡಲು ಸಹಕರಿಸುತ್ತದೆ.

(1) a ಮತ್ತು b ಮಾತ್ರ ಸರಿ
(2) a ಮತ್ತು c ಮಾತ್ರ ಸರಿ
(3) a ಮತ್ತು d ಮಾತ್ರ ಸರಿ
(4) c ಮತ್ತು d ಮಾತ್ರ ಸರಿ



Teachingninja.in

45. ''ನಿರ್ವಹಣೆ ಎಂಬುದು ಬೇರೆಯವರಿಂದ ಕೆಲಸವನ್ನು ಮಾಡಿಸುವ ಒಂದು ಕಲೆಯಾಗಿದೆ'' ಎಂದು ಹೇಳಿದವರು

(1) ಜಾರ್ಜ್ ಆರ್. ಟೆರ್ರಿ

(2) ಜೆ.ಎಲ್. ಹೇನ್ಸ್

(3) ಹೆನ್ರಿ ಫಯೋಲ್

(4) ಮ್ಯಾಕ್ಸ್‌ವೆಬರ್

46. ಜಾಗೃತ ಜ್ವಾಲಾಮುಖಿಯ ಸೂಸುವಿಕೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ಒಬ್ಬ ಶಿಕ್ಷಕನು ಬಳಸುವ ಸಾಧನ

(1) ವಾಯುಗುಣದ ನಕ್ಷೆ

(2) ಕಾರ್ಯಾತ್ಮಕ ಮಾದರಿ

(3) ಸ್ಥಿರ ಮಾದರಿ

(4) ಗೋಳ

47. ಮೌಲ್ಯಮಾಪನದ ಉದ್ದೇಶವು

(1) ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡುವುದು

(2) ವಿದ್ಯಾರ್ಥಿಗಳ ಕಲಿಕಾ ಕೌಶಲ್ಯಗಳನ್ನು ಪರೀಕ್ಷಿಸುವುದು

(3) ಅಂಕಗಳು ಮತ್ತು ಗ್ರೇಡ್‌ಗಳನ್ನು ನೀಡುವುದು

(4) ಬೋಧನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು

48. ನಾಗರಿಕ ಪ್ರಜ್ಞೆಯನ್ನು ಬೋಧಿಸುವ ಸಮಾಜವಿಜ್ಞಾನ ವಿಷಯದ ಶಾಖೆ

(1) ಭೂಗೋಳಶಾಸ್ತ್ರ

(2) ಅರ್ಥಶಾಸ್ತ್ರ

(3) ವ್ಯವಹಾರ ಅಧ್ಯಯನ

(4) ರಾಜ್ಯಶಾಸ್ತ್ರ

49. ಅಕ್ಷಾಂಶ ಮತ್ತು ರೇಖಾಂಶಗಳನ್ನು ಪರಿಣಾಮಕಾರಿಯಾಗಿ ಬೋಧಿಸಲು ಸಹಕಾರಿಯಾದದ್ದು

(1) ಗ್ಲೋಬ್ (ಗೋಳ)

(2) ಚಾರ್ಟ್

(3) ಕಾಲ ರೇಖೆ

(4) ಚಿತ್ರಪಟ

50. ''ಬೋಧನೆ ಎಂದರೆ ಕಲಿಕೆಗೆ ಪ್ರಚೋದನೆ, ಮಾರ್ಗದರ್ಶನ ಮತ್ತು ಪ್ರೋತ್ಸಾಹಿಸುವುದು'' ಎಂದು ಹೇಳಿದವರು

(1) ಬರ್ಟನ್

(2) ಮ್ಯಾರಿಸನ್

(3) ಎನ್.ಎಸ್. ವೀರಪ್ಪ

(4) ಡಬ್ಲ್ಯೂ.ಆರ್. ರೈಬರ್ನ್



Teachingninja.in

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ 30 ಪದಗಳಲ್ಲಿ ಉತ್ತರಿಸಿ. (20×3=60)

51. ಪಿರಮಿಡ್ಡುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

52. ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.

53. ಗುಪ್ತರ ಇತಿಹಾಸವನ್ನು ತಿಳಿದುಕೊಳ್ಳಲು ಇರುವ ಆಕರಗಳನ್ನು ಪಟ್ಟಿಮಾಡಿ.

54. ಶಂಕರಾಚಾರ್ಯರ ಸಿದ್ಧಾಂತದ ಸಾರವನ್ನು ವಿವರಿಸಿ. → ಅದ್ವೈತ

55. "ನಾಲ್ವಡಿ ಕೃಷ್ಣರಾಜ ಒಡೆಯರ್‌ರವರನ್ನು ಆಧುನಿಕ ಮೈಸೂರು ರಾಜ್ಯದ ನಿರ್ಮಾಪಕರೆಂದು ಕರೆಯುತ್ತಾರೆ." ಸಮರ್ಥಿಸಿ.

56. ಭಾರತದ ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಕರ್ತವ್ಯಗಳಾವುವು ?

57. ಸ್ಥಳೀಯ ಸ್ವಯಂ ಸರ್ಕಾರದ ಕಾರ್ಯಗಳನ್ನು ಪಟ್ಟಿಮಾಡಿ.

58. ಭಾರತವು ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಏಕೆ ?

59. ಭದ್ರತಾ ಸಮಿತಿಯ ಕಾರ್ಯಗಳನ್ನು ತಿಳಿಸಿ.

60. ಸಮಾಜದ ವಿವಿಧ ಪ್ರಕಾರಗಳನ್ನು ತಿಳಿಸಿ.

61. ಆಧುನಿಕ ವಿಭಕ್ತ ಕುಟುಂಬಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಏಕೆ ?

62. ರೇಖಾಂಶ ಮತ್ತು ಕಾಲಮಾನದ ನಡುವಿನ ಸಂಬಂಧವನ್ನು ವಿಶ್ಲೇಷಿಸಿ.

63. ಮಹಾಹಿಮಾಲಯದ ಪ್ರಾಮುಖ್ಯತೆ ತಿಳಿಸಿ.

64. ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಉದ್ದೇಶಗಳೇನು ?

65. ಸಹ್ಯಾದ್ರಿ ಬೆಟ್ಟಗಳ ಪಶ್ಚಿಮ ಇಳಿಜಾರುಗಳು ನಿತ್ಯಹರಿದ್ವರ್ಣ ಅರಣ್ಯಗಳನ್ನು ಹೊಂದಿದ್ದರೆ, ಪೂರ್ವ ಇಳಿಜಾರುಗಳು ಮಿಶ್ರ ಅರಣ್ಯಗಳಿಂದ ಕೂಡಿವೆ. ಏಕೆ ?



Teachingninja.in

66. ಪಂಚಾಯತ್‌ರಾಜ್ ಸಂಸ್ಥೆಗಳ ಲಕ್ಷಣಗಳಾವುವು ?

67. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಪಾತ್ರವೇನು ?

68. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇದೆ. ಏಕೆ ?

69. ಬ್ಯಾಂಕುಗಳಲ್ಲಿ ಖಾತೆಯನ್ನು ತೆರೆಯಲು ಅನುಸರಿಸುವ ವಿವಿಧ ಹಂತಗಳನ್ನು ವಿವರಿಸಿ.

70. ವ್ಯವಹಾರದಲ್ಲಿ ಲೆಕ್ಕಬರಹದ ಪ್ರಾಮುಖ್ಯತೆ ಏನು ?

ಕೆಳಗಿನ ಪ್ರಶ್ನೆಗಳಿಗೆ 40 ಪದಗಳಲ್ಲಿ ಉತ್ತರಿಸಿ. (10×4=40)

71. ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಉಂಟಾದ ಪ್ರಮುಖ ಬೆಳವಣಿಗೆಗಳು ಯಾವುವು ?

72. 1857ರ ದಂಗೆಗೆ ಆರ್ಥಿಕ ಕಾರಣಗಳನ್ನು ವಿವರಿಸಿ.

73. ನೆಹರೂರವರನ್ನು 'ನವ ಭಾರತದ ಶಿಲ್ಪಿ' ಎನ್ನುತ್ತಾರೆ. ಏಕೆ ?

74. ಭಾರತದ ಸಂವಿಧಾನದಲ್ಲಿ ಅಳವಡಿಸಿರುವ ರಾಜ್ಯ ನೀತಿ-ನಿರ್ದೇಶಕ ತತ್ವಗಳಾವುವು ?

75. ರಾಜ್ಯಪಾಲರ ಅರ್ಹತೆ ಮತ್ತು ಅಧಿಕಾರವನ್ನು ವಿವರಿಸಿ.

76. ಅಸ್ಪೃಶ್ಯತಾ ನಿವಾರಣೆಗೆ ಶಾಸನಾತ್ಮಕವಾಗಿ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

77. ಭಾರತದಲ್ಲಿ ನಿರುದ್ಯೋಗಕ್ಕೆ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸಿ.

78. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳನ್ನು ವಿವರಿಸಿ.

79. "ಭಾರತವು ಭವಿಷ್ಯದಲ್ಲಿ ಅಸಾಂಪ್ರದಾಯಿಕ ಇಂಧನ ಮೂಲಗಳನ್ನು ಅವಲಂಬಿಸಲೇಬೇಕು." ವಿಶ್ಲೇಷಿಸಿ.

80. ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳನ್ನು ಹೆಸರಿಸಿ.



Teachingninja.in